ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 73/2024**

ಪ್ರ.ವ.ಬೋ.ತಾಃ 03-06-2026

ಚಾಸಾಃ 8 ಪ್ರಾಸಾಃ 6

| | |
|---|---|
| ಸಾಕ್ಷಿಯ ಹೆಸರು | ಓಬಳನರಸಿಂಹಪ್ಪ |
| ತಂದೆ/ಗಂಡನ ಹೆಸರು | ತಿಮ್ಮಪ್ಪ |
| ವಯಸ್ಸು | 39 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಚೆನ್ನೇನಹಳ್ಳಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಈಗ ತೋರುತ್ತಿರುವ ವಾಹನ ಪರಿಶೀಲನಾ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.14 ಎಂದು, ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಅದಕ್ಕೆ ನಾನು 2019 ನೇ ಸಾಲಿನಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನ್ನ ಜೊತೆ ಬೇರೆ ಯಾರು ಇದ್ದರು ಎಂಬುದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈಗ ತೋರುತ್ತಿರುವ ಎರಡು ಫೋಟೋಗಳಲ್ಲಿರುವ ವ್ಯಕ್ತಿ ನಾನೇ ಆಗಿರುತ್ತೇನೆ. ಅವುಗಳನ್ನು ನಿಪಿ.15 ಮತ್ತು 16 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ದಿಃ 27.07.2024 ರಂದು ನನ್ನ ಹಾಗೂ ಚಾಸಾ.9 ರವರ ಸಮಕ್ಷಮ ಪೊಲೀಸರು ಸಂಜೆ 7.30 ರಿಂದ 8.30 ಗಂಟೆಯವರೆಗೆ ಪೊಲೀಸ್ ಠಾಣಾ ಆವರಣದಲ್ಲಿ ಅಮಾನತ್ತು ಪಂಚನಾಮೆ ಮಾಡಿ ಅಪಘಾತಪಡಿಸಿದ ವಾಹನ ಸಂಃ ಕೆಎ–52–ಬಿ–4874 ರ ಕಂಟೈನರ್ ವಾಹನವನ್ನು ಅಮಾನತ್ತುಪಡಿಸಿಕೊಂಡರು ಎಂದರೆ ಸರಿ. ಆ ಸಮಯದಲ್ಲಿ ನಿಪಿ.15 ಮತ್ತು 16 ರಂತಹ ಫೋಟೋಗಳನ್ನು ತೆಗೆದರು ಎಂದರೆ ಸರಿ.

**<u>ಪಾಟೀ ಸವಾಲುಃ</u>– ಆರೋಪಿಯ ಪರವಾಗಿ ಶ್ರೀ. ಎನ್.ಆರ್. ವಕೀಲರಿಂದಃ–**

ಆ ಅಮಾನತ್ತು ಪಂಚನಾಮೆಯನ್ನು ಯಾವ ದಿನಾಂಕದಂದು ಮತ್ತು ಎಷ್ಟು ಗಂಟೆ ಸಮಯದಲ್ಲಿ ಬರೆದರು ಎಂಬುದು ನನಗೆ ಗೊತ್ತಿಲ್ಲ. ಆ ಅಮಾನತ್ತು ಪಂಚನಾಮೆಯನ್ನು ಯಾರು ಬರೆದರು ಮತ್ತು ಎಲ್ಲಿ ಬರೆದರು ಎಂಬುದು ನನಗೆ ಗೊತ್ತಿಲ್ಲ. ಆ ದಾಖಲೆಗೆ ನಾನು ನಮ್ಮ ಊರಿನ ಹತ್ತಿರ ಅಪಘಾತಕ್ಕೆ ಸಂಬಂಧಪಟ್ಟಂತೆ ಸಹಿ ಮಾಡಿರುತ್ತೇನೆ. ಆ ದಿನ ಪೊಲೀಸರು ಯಾವುದೇ ಅಮಾನತ್ತು ಪಂಚನಾಮೆ ಮಾಡಿಲ್ಲ ಮತ್ತು ಆ ಸಮಯದಲ್ಲಿ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ